# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 653 (783)
ಸದಸ್ಯರ ಹೆಸರು : ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 21.08.2026
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
| --- | --- | --- |
| (ಅ) | ಕೃಷ್ಣಾ ಮೇಲ್ದಂಡೆ ಯೋಜನೆಗೆ ರೂ.75.000 ಕೋಟಿ ವಿಶೇಷ ಅನುದಾನ ನೀಡುವುದಾಗಿ ಸರ್ಕಾರವು ಕಳೆದ ಒಂದು ವರ್ಷದೊಳಗಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿರುವುದು ನಿಜವೇ; ನಿಜವಾದಲ್ಲಿ, ಈ ನಿರ್ಣಯವನ್ನು ಕೈಗೊಂಡ ಸಚಿವ ಸಂಪುಟ ಸಭೆಯ ದಿನಾಂಕ ಮತ್ತು ಅದರ ಸಂಪೂರ್ಣ ವಿವರಗಳೇನು; | ಹೌದು,<br>ದಿನಾಂಕ:16.09.2025ರ ವಿಶೇಷ ಸಚಿವ ಸಂಪುಟದ ಸಭೆಯ ನಿರ್ಣಯದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ:ಜಸಂಇ 93 ಕೆಬಿಎನ್ 2025 ದಿನಾಂಕ:09-10-2025ರ ಆದೇಶದಲ್ಲಿ "ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆ ಅಡಿಯ ಭೂಸ್ವಾಧೀನ, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯಕ್ರಮಕ್ಕೆ ಅಗತ್ಯವಿರುವ ಹೆಚ್ಚುವರಿ ಸುಮಾರು ರೂ 75,000 ಕೋಟಿ ಮೊತ್ತವನ್ನು ಮುಂದಿನ 04 ವರ್ಷಗಳಲ್ಲಿ ಭರಿಸಲು ಸುಮಾರು ರೂ.18000 ಕೋಟಿ ವಾರ್ಷಿಕ ಅನುದಾನವನ್ನು ಜಲಸಂಪನ್ಮೂಲ ಇಲಾಖೆಗೆ ಆಯವ್ಯಯದಲ್ಲಿ ಸೂಕ್ತವಾಗಿ ಕಲ್ಪಿಸುವುದು" ಎಂದು ಆದೇಶಿಸಲಾಗಿದೆ. |
| (ಆ) | ರಾಜ್ಯ ಸರ್ಕಾರವು ಭರವಸೆ ನೀಡಿ ಮತ್ತು ಸಚಿವ ಸಂಪುಟದಲ್ಲಿ ಅಧಿಕೃತವಾಗಿ ನಿರ್ಣಯ ಕೈಗೊಂಡಿದ್ದರೂ ಸಹ ಇಲ್ಲಿಯವರೆಗೆ ಈ ಸದರಿ ಅನುದಾನವನ್ನು ಬಿಡುಗಡೆ ಮಾಡದಿರಲು ಹಾಗೂ ಬಜೆಟ್ ನಲ್ಲಿ ಮೀಸಲಿಡದಿರಲು ಕಾರಣಗಳೇನು; ಈ ಹಣಕಾಸು ವಿಳಂಬಕ್ಕೆ ಸಂಬಂಧಪಟ್ಟ ಇಲಾಖೆಯ ನಿರ್ಲಕ್ಷ್ಯ ಕಾರಣವೇ ಅಥವಾ ಆರ್ಥಿಕ ಇಲಾಖೆಯ ಒಪ್ಪಿಗೆ ಸಿಕ್ಕಿಲ್ಲವೇ; | 2026-27ನೇ ಸಾಲಿನ ಆಯವ್ಯಯದಲ್ಲಿ UKP-3ರ ಭೂಸ್ವಾಧೀನ, ಪುನರ್ ವಸತಿ ಮತ್ತು ಪುನರ್‌ನಿರ್ಮಾಣಕ್ಕಾಗಿ ರೂ.3000 ಕೋಟಿ ಅನುದಾನವನ್ನು ಕಾಯ್ದಿರಿಸಿದ್ದು, ಇಲ್ಲಿಯವರೆಗೆ ಭೂಸ್ವಾಧೀನಕ್ಕಾಗಿ ರೂ.600 ಕೋಟಿ ಬಿಡುಗಡೆಯಾಗಿರುತ್ತದೆ. ರೂ 466.67 ಕೋಟಿ ಮೊತ್ತ ವೆಚ್ಚವಾಗಿರುತ್ತದೆ. ಬಾಕಿ ರೂ.133.33 ಕೋಟಿಗಳ ಅನುದಾನ ಬಳಸಿಕೊಳ್ಳುವ ಮಾರ್ಗಸೂಚಿ ಕುರಿತಂತೆ ಪ್ರಸ್ತಾವನ ಪರಿಶೀಲನೆಯಲ್ಲಿದೆ.<br><br>ನ್ಯಾಯಾಂಗ ನಿಂದನಾ ಪ್ರಕರಣಗಳ ಇತ್ಯರ್ಥಕ್ಕೆ, ಒಪ್ಪಂದದ ಐತೀರ್ಪು ದರಗಳಂತೆ ಮುಳುಗಡೆ ಜಮೀನನ್ನು ಭೂಸ್ವಾಧೀನಗೊಳಿಸಲು, ಲೋಕ-ಅದಾಲತ್ ನಲ್ಲಿನ ಪ್ರಕರಣಗಳ ಇತ್ಯರ್ಥಕ್ಕೆ, ಕಾಲುವೆ ಜಾಲದ ಜಮೀನಿನ ಭೂಸ್ವಾಧೀನಗೊಳಿಸಲು ಹಾಗೂ EP ಪ್ರಕರಣಗಳ ಇತ್ಯರ್ಥಕ್ಕೆ ಬೇಕಾಗುವ ಹೆಚ್ಚುವರಿ ರೂ.3130.66 ಕೋಟಿ ಅನುದಾನ ಬಿಡುಗಡೆ ಪ್ರಸ್ತಾವನೆಯ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. |
| (ಇ) | ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಭೂಸ್ವಾಧೀನ, ಪುನರ್ ವಸತಿ ಪುನರ್ ನಿರ್ಮಾಣ (R&R) ಕಾರ್ಯಗಳಿಗೆ ಈ ಅನುದಾನದ ಕೊರತೆಯಿಂದಾಗಿ ಆಗಿರುವ ಹಿನ್ನಡೆ ಹಾಗೂ ವಿಳಂಬದ ಪ್ರಮಾಣ ಎಷ್ಟು; ಇದರಿಂದಾಗಿ ಯೋಜನಾ ವೆಚ್ಚ ಮತ್ತಷ್ಟು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆಗೆ ದಿನಾಂಕ:16.09.2025ರ ವಿಶೇಷ ಸಚಿವ ಸಂಪುಟ ಸಭೆಯ ನಿರ್ಣಯದಂತೆ, ದಿನಾಂಕ:09.10.2025ರ ಆದೇಶದಲ್ಲಿ ಮುಳುಗಡೆ ಜಮೀನಿನ ಎಕರೆಗೆ (a) ಖುಷ್ಕಿ ಭೂಮಿಗೆ (Dry Land) ರೂ.30.00 ಲಕ್ಷ (b) ತರಿ ಭೂಮಿಗೆ (WetLand) ರೂ.40.00 ಲಕ್ಷ ಮತ್ತು ಕಾಲುವೆ ಜಮೀನುಗಳ ಎಕರೆಗೆ (a) ಖುಷ್ಕಿ ಭೂಮಿಗೆ (Dry Land) ರೂ.25.00 ಲಕ್ಷ ಮತ್ತು (b) ತರಿ ಭೂಮಿಗೆ (WetLand) ರೂ.30.00 ಲಕ್ಷ ಒಪ್ಪಂದದ ಐತೀರ್ಪು ದರಗಳನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.<br><br>ಅದರಂತೆ UKP-3ರ ಯೋಜನೆಯ ಮುಳುಗಡೆ ಹೊಂದಲಿರುವ 1736ಎ-10ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಪರಿಹಾರ ವಿತರಿಸಲಾಗಿದೆ. ಬಾಕಿ ಉಳಿದ ಜಮೀನುಗಳ ಭೂಸ್ವಾಧೀನಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ದಿನಾಂಕ 24.01.2026, 14.03.2026 ಹಾಗೂ 11.07.2026 ರಂದು ಜರುಗಿದ ಲೋಕ್-ಅದಾಲತ್ ಗಳಲ್ಲಿ ಒಪ್ಪಂದದ ಐತೀರ್ಪು ದರಗಳಲ್ಲಿ ಇತ್ಯರ್ಥಪಡಿಸಿಕೊಳ್ಳಲು ರೈತರುಗಳಿಂದ 3,345 ಎಕರೆಗೆ ಜಮೀನಿಗೆ ಸಂಬಂಧಿಸಿದಂತೆ 4,212 Joint Memoಗಳು ರೂ.713.31 ಕೋಟಿ ಮೊತ್ತಕ್ಕೆ ಸ್ವೀಕೃತಗೊಂಡಿರುತ್ತವೆ. ಪರಿಹಾರ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.ಇದಲ್ಲದೇ, ನ್ಯಾಯಾಲಯಗಳಲ್ಲಿನ ಪ್ರಕರಣಗಳನ್ನೂ ಸಹಾ ಸದರಿ ಒಪ್ಪಂದದ ಐತೀರ್ಪು ದರಗಳಲ್ಲಿ ಇತ್ಯರ್ಥಪಡಿಸಿಕೊಳ್ಳಲು ರೈತರುಗಳು ಮುಂದೆ ಬಂದಿರುತ್ತಾರೆ.<br><br>ಸರ್ಕಾರವು ಆದೇಶ ದಿನಾಂಕ:09.10.2017 ರಲ್ಲಿ UKP ಹಂತ-3 ಯೋಜನೆಯ ಅನುಷ್ಠಾನಕ್ಕೆ ರೂ.51,148.94 ಕೋಟಿ (2014-15ನೇ ಸಾಲಿನ ದರಪಟ್ಟಿಯನ್ವಯ) ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.<br><br>ಇದರಲ್ಲಿ ಭೂಸ್ವಾಧೀನ, ಪುನರ್ ವಸತಿ & ಪುನರ್ ನಿರ್ಮಾಣ (R&R) ಕಾರ್ಯಗಳಿಗೆ ರೂ 30,143.17 ಕೋಟಿ ಮೊತ್ತ ಪ್ರಾವಿದಾನ ಇದ್ದು. ಇದರಲ್ಲಿ ಜುಲೈ-2026ರ ಅಂತ್ಯಕ್ಕೆ ರೂ. 10,234.98 ಕೋಟಿ ಮೊತ್ತವನ್ನು ವೆಚ್ಚ ಮಾಡಲಾಗಿರುತ್ತದೆ. ಇನ್ನೂ ರೂ.19,908.19 ಕೋಟಿ ಮೊತ್ತದ ಪ್ರಾವಿಧಾನ ಇರುವುದರಿಂದ ಪ್ರತಿ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.<br><br>ಸದರಿ ಯೋಜನೆಯ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು RL 519.60 ಮೀ. ನಿಂದ RL 524.256 ಮೀ.ರವರೆಗೆ ಎತ್ತರಿಸುವುದು ಕೇಂದ್ರ ಸರ್ಕಾರದಿಂದ ಹೊರಡಿಸುವ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ಅಧಿಸೂಚನೆಗೆ ಒಳಪಟ್ಟಿರುತ್ತದೆ. |
| (ಈ) | ಉತ್ತರ ಕರ್ನಾಟಕದ ರೈತರ ಜೀವನಾಡಿಯಾಗಿರುವ ಈ ಯೋಜನೆಗೆ ಬಾಕಿ ಇರುವ ರೂ.75,000 ಕೋಟಿ ಹಣವನ್ನು ಸರ್ಕಾರವು ಯಾವ ನಿಶ್ಚಿತ ಕಾಲಮಿತಿಯೊಳಗೆ ಬಿಡುಗಡೆ ಮಾಡಲಿದೆ; ಈ ಪ್ರಸಕ್ತ ಅಧಿವೇಶನ ಮುಗಿಯುವುದರೊಳಗೆ ಹಣ ಬಿಡುಗಡೆಗೆ ಆದೇಶ ಹೊರಡಿಸಲಾಗುತ್ತದೆಯೇ? (ಮಾಹಿತಿ ನೀಡುವುದು) | ಆಯವ್ಯಯದಲ್ಲಿ ಹಂಚಿಕೆಯಾಗುವ ಅನುದಾನವನ್ನು, ಆರ್ಥಿಕ ಪ್ರತ್ಯಾ ಯೋಜಯನೆಯ ಅನುಸಾರ ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ:ಜಸಂಇ 76 ಡಬ್ಲ್ಯೂಬಿಎಂ 2026

(ಎನ್. ಚಲುವರಸ್ವಾಮಿ)
ಜಲಸಂಪನ್ಮೂಲ ಸಚಿವರು